# ಮಗಳು ಮತ್ತು ಹೆಲ್ಮೆಟ್

■ ತಿಮ್ಮಯ್ಯ ಶೆಟ್ಟಿ ಇಲ್ಲೂರು
ಕಲೆ: ಸಂತೋಷ್ ಸಸಿಹಿತ್ಲು



ಚಿನ್ನು ನಾಲ್ಕು ವರ್ಷದ ಪುಟ್ಟ ಹುಡುಗಿ. ದಿನಾಲು ತನ್ನ ಆಟಿಕೆಗಳನ್ನು ಮನೆಯ ತುಂಬೆಲ್ಲ ಚೆಲ್ಲಿ ಆಟವಾಡುವುದು ಅವಳ ದಿನಚರಿ. ಅಂದು ರವಿವಾರ ಮನೆಯಲ್ಲಿ ಕಸ ಗುಡಿಸಿ ಬಾಂಡೆ ತೊಳೆಯಲು ಚಿನ್ನುವಿನ ಅಮ್ಮ ಎಲ್ಲಾ ಆಟಿಕೆಗಳನ್ನು ತೆಗೆದು ಒಂದು ಬುಟ್ಟಿಯಲ್ಲಿ ಹಾಕಿ, ಚಿನ್ನು ಹರಿದು ಹಾಕಿದ ಪೇಪರ್‌ಗಳೆಲ್ಲವನ್ನು ತೆಗೆದು ಕಸ ಗುಡಿಸಿ ಒಳಗಡೆ ಅಡುಗೆ ಮನೆಯಿಂದ ಬಾಂಡೆ ತೊಳೆಯುತ್ತಾ ಬಂದ ತಾಯಿ ಮತ್ತೆ ಮಗಳು ತನ್ನೆಲ್ಲ ಆಟಿಕೆ ಮನೆ ತುಂಬಾ ಸುರಿವಿರುವುದನ್ನು ನೋಡಿ ಮಗಳ ಮೇಲೆ ರೇಗಾಡಿದಳು. ಅದರಿಂದ ಮನನೊಂದ ಚಿನ್ನು ಹೋ... ಎಂದು ಅಳಲು ಶುರು ಮಾಡಿದಳು. ಎಷ್ಟೇ ಸಮಾಧಾನಪಡಿಸಿದರು ಶಾಂತಳಾಗದ ಚಿನ್ನುವನ್ನು ಎದುರು ಮನೆಯಲ್ಲಿನ ವಿನೂತನ ಜೊತೆ ಆಟವಾಡಲು ಕಳುಹಿಸಿ, ನಂತರ ನಾಳೆ ಸೋಮವಾರ ಮನೆ ದೇವರ ಪೂಜೆ ಮಾಡುವುದಿದೆ ಬೇಗ ಬೇಗ ಮನೆಯನ್ನು ಸ್ವಚ್ಛಗೊಳಿಸಬೇಕೆಂದು ಅರ್ಧ ಗಂಟೆಯಲ್ಲಿ ಮನೆಯನ್ನು ಗುಡಿಸಿ ತೊಳೆದು ಪಳ ಪಳ ಹೊಳೆಯುವಂತೆ ಮಾಡಿದಳು.

ಎದುರು ಮನೆಯ ವಿನೂತನ ಜೊತೆ ಆಟವಾಡಲು ಹೋಗಿದ್ದ ಚಿನ್ನು ಮತ್ತೆ ಅದೇಕೋ ಅಳುತ್ತಾ ಬಂದಳು. 'ಯಾಕೆ? ಏನಾಯ್ತು?' ಎಂದು ತಾಯಿ ಕೇಳಿದಾಗ ವಿನೂತ ಅವರ ಮಾಮ ಹೊಸ ಹೆಲ್ಮೆಟ್ ತಂದಿರುವುದನ್ನು ನೋಡಿ ಅಂಥದ್ದು ತನಗೂ ಬೇಕೆಂದು ಅಳತೊಡಗಿದಳು. ಅದು ಆಟಿಕೆಯಲ್ಲ ಮಾಮನು ಗಾಡಿಯ ಮೇಲೆ ಹೊರಗಡೆ ಹೋಗುವಾಗ ತಲೆಗೆ ಹಾಕಿಕೊಂಡು ಹೋಗುತ್ತಾನೆ. ನೀನಿನ್ನು ಚಿಕ್ಕವಳು ಅದನ್ನು ತಗೋಬಾರದು ಎಂದು ತಾಯಿ ಹೇಳಿದರು ಕೇಳದೆ ಇಲ್ಲ... ಇಲ್ಲ... ನನಗೆ ಬೇಕು ಎಂದು ಅಳತೊಡಗಿದಳು. ಚಿನ್ನು ನೀನು ಚಿಕ್ಕವಳು, ದೊಡ್ಡವಳಾದ ಮೇಲೆ ನಿನಗೆ ಮತ್ತೊಂದು ಹೊಸ ಹೆಲ್ಮೆಟ್ ತರುವೆ ಎಂದು ವಿನೂತನ ಮಾಮ ಸುರೇಶ ಹೇಳಿದರೂ ಕೇಳದ ಚಿನ್ನು, ಅದು ನನಗೆ ಬೇಕು ನಾನು ನನ್ನ ಅಪ್ಪನಿಗೆ ಕೊಡುವೆ ಎಂದು ಅಳತೊಡಗಿದಳು. ಆಗ ಚಿನ್ನುವಿನ ತಾಯಿ ಓಹೋ! ಅಪ್ಪನಿಗೆ ಕೊಡುತ್ತೀಯಾ, ಸರಿ ಹಾಗಾದ್ರೆ ನಮ್ಮ ಮನೆಯಲ್ಲಿ ಹೆಲ್ಮೆಟ್ ಇದೆ ಬಾ ಹೋಗೋಣ. ಅಪ್ಪ ಬರಲಿ ತೆಗೆಸಿ ಕೊಡುತ್ತೇನೆ ಎಂದಾಗ ಚಿನ್ನು ಸಮಾಧಾನಗೊಂಡು ಅವಳ ಅಪ್ಪ ಬರುವುದನ್ನೇ ಕಾಯುತ್ತಾ ಕೂತಳು. ಕೆಲಸಕ್ಕೆ ಹೋದ ಅಪ್ಪ ಮನೆಗೆ ಬಂದ ತಕ್ಷಣ ಅಪ್ಪನಿಗೆ ಮೊದಲು ಹೆಲ್ಮೆಟ್ ಕೊಡಲು ಚಿನ್ನು ಕೇಳಿದಳು. ಆಗ ಏಕೆಂದು ಚಿನ್ನುವಿನ ತಂದೆ ಕೇಳಿದಾಗ ಅವಳ ತಾಯಿ ನಡೆದ ವಿಷಯವನ್ನು ತನ್ನ ಗಂಡನಿಗೆ ತಿಳಿಸಿದಳು. ಆಗಲಿ ಎಂದು ಮನೆಯ ಸಜ್ಜೆಯ ಮೇಲೆ ಕೆಲ ವರ್ಷಗಳ ಹಿಂದೆ ತಂದು ಇಟ್ಟಿದ್ದ ಹೆಲ್ಮೆಟ್ ತೆಗೆದು ಚಿನ್ನುವಿನ ಕೈಗೆ ಕೊಟ್ಟಾಗ ಅವಳ ಖುಷಿಗೆ ಪಾರವೇ ಇರಲಿಲ್ಲ. ತಕ್ಷಣವೇ ಹೆಲ್ಮೆಟನ್ನು ಕೈಯಲ್ಲಿ ಹಿಡಿದುಕೊಂಡು ತಲೆಗೆ ಹಾಕಿಕೊಂಡು ತನ್ನ ಅಪ್ಪನಿಗೂ ಹಾಕಿ ಮತ್ತೆ ತೆಗೆದು ಕೈಯಲ್ಲಿ ಹಿಡಿದು ಅಂಗಳಕ್ಕೆ ಬಂದವಳೇ ಖುಷಿಯಿಂದ ವಿನೂತನನ್ನು ಕರೆದು ನಮ್ಮ ಮನೆಯಲ್ಲಿಯೂ ಹೆಲ್ಮೆಟ್ ಇದೆ ಎಂದು ತೋರಿಸಿ ಕುಣಿದು ಕುಪ್ಪಳಿಸಿದಳು.

ಅಪ್ಪ ಹೊರಗೆ ಹೋಗಲು ತಯಾರಾದರೆ ಸಾಕು ಚಿನ್ನು ಹೆಲ್ಮೆಟ್ ತೆಗೆದುಕೊಂಡು ಅಪ್ಪನಿಗೆ ಕೊಡುತ್ತಿದ್ದಳು. ಬೇಡಮ್ಮ ತುಂಬಾ ಸೆಕೆ ಆಗುತ್ತೆ, ಉಸಿರಾಡಲು ಆಗಲ್ಲ ಎಂದರೂ ಕೇಳದೆ ಚಿನ್ನು ಅಪ್ಪನಿಗೆ ಹೆಲ್ಮೆಟ್ ಕೊಟ್ಟು ಹಾಕಿಕೊಳ್ಳುವವರೆಗೆ ಬಿಡದೆ ಅಳಲು ಆರಂಭಿಸುತ್ತಿದ್ದಳು. ಮಗಳನ್ನು ಸಮಾಧಾನ ಪಡಿಸಲು ಚಿನ್ನುವಿನ ತಂದೆ ಹೆಲ್ಮೆಟ್ ತೆಗೆದುಕೊಂಡು ಗಾಡಿಯ ಕನ್ನಡಿಗೆ ಹಾಕಿಕೊಂಡು ಹೊರಡುತ್ತಿದ್ದರು. ಮನೆಗೆ ವಾಪಸ್ ಬರುತ್ತಲೆ ಓಡಿಬಂದ ಚಿನ್ನು, ಅಪ್ಪನನ್ನು ನೋಡಿ ಅಪ್ಪ ಯಾಕೆ ಹೆಲ್ಮೆಟ್ ಹಾಕಿಕೊಂಡಿಲ್ಲ? ಎಂದು ಪ್ರಶ್ನಿಸುತ್ತಿದ್ದಳು. ಮಾರನೆ ದಿನ ಬೆಳಗ್ಗೆ ಕೆಲಸಕ್ಕೆ ಹೋಗಲು ಅಪ್ಪ ತಯಾರಾಗುತ್ತಿದ್ದಂತೆ ಚಿನ್ನು ಹೆಲ್ಮೆಟ್ ಮತ್ತೆ ನೀಡಿ ಹಾಕಿಕೊಳ್ಳುವಂತೆ ಅಳುತ್ತಿದ್ದಳು. ಸರಿ ಎಂದು ಚಿನ್ನುವಿನ ಅಪ್ಪ ಹೆಲ್ಮೆಟ್ ಹಾಕಿಕೊಂಡು ಹೊರಡುತ್ತಿದ್ದರು. ಹೀಗೆ ದಿನಾಲು ಮಗಳ ಖುಷಿಗಾಗಿ ಹಲವು ವರ್ಷಗಳಿಂದ ಮನೆಯ ಮೂಲೆಯಲ್ಲಿಟ್ಟಿದ್ದ ಹೆಲ್ಮೆಟ್ ತೆಗೆದು ಹಾಕಿಕೊಳ್ಳುವ ಅಭ್ಯಾಸವಾಯಿತು. ■